ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **341/2021**

| | | |
|---|---|---|
| ಸಾಕ್ಷಿಯ ಹೆಸರುಃ | ದೇವಿಂದ್ರಪ್ಪ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ನರಸಿಂಗಪ್ಪ | ಚಾಸಾಃ 2 |
| ವಯಸ್ಸು ಃ | 45 ವರ್ಷ | ದಿಃ 06-03-2026 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 3 ರವರ ಪರಿಚಯ ಇದೆ. ಚಾಸಾಃ 3 ರವರು ಮರಣ ಹೊಂದಿರುತ್ತಾರೆ. ನನಗೆ ಆರೋಪಿತರ ಪರಿಚಯ ಇದೆ. ದಿನಾಂಕಃ 23-04-2021 ರಂದು ಸಾಯಂಕಾಲ ಜಗಳವಾಗಿರುತ್ತದೆ, ಬೆಳಿಗ್ಗೆ 10.00 ಗಂಟೆಗೆ ನಾನು ಮತ್ತು ಚಾಸಾಃ 3 ರವರು ಹೋಗಿರುತ್ತೇವೆ. ಪೊಲಿಸರು ಪಂಚನಾಮೆಗೆ ಬಂದಿರುತ್ತಾರೆ. ಪೊಲಿಸರು ನಮಗೆ ಕರೆದು ಫೋಟೊ ತೆಗೆದುಕೊಂಡಿರುತ್ತಾರೆ. ಪೊಲಿಸರು ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಚಾಸಾಃ 1 ಮತ್ತು ಆರೋಪಿತರ ನಡುವೆ ಜಗಳವಾಗಿದ್ದರ ಬಗ್ಗೆ ಹೇಳಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ . ಎಮ್. ಬಿ. ಪಿ

1. ನನ್ನ ಮನೆ ಸೈದಾಪೂರ ಅಗಸಿಯಲ್ಲಿ ಬರುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ಘಟನಾ ಸ್ಥಳ 150 ಮೀಟರ ಅಂತರದಲ್ಲಿ ಇದೆ. ಚಾಸಾಃ 1 ಮತ್ತು ಆರೋಪಿತರ ನಡುವೆ ಜಮೀನಿನ ಸಲುವಾಗಿ ಜಗಳ ಇದೆ ಎಂದರೆ ಸರಿ. ಸದರಿ ಆರೋಪಿತರು ದಾವೆ ಸಲ್ಲಿಸಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾಃ 4 ರವರು ಮತ್ತು ಆರೋಪಿತರ ನಡುವೆ ವಿವಾದ ಇರುವುದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಪೊಲಿಸರು ಕರೆದಿರುತ್ತಾರೆ. ನಾನು ಹೋಗುವಾಗ ಕರೆದಿರುತ್ತಾರೆ. ಪಂಚನಾಮೆ ಮಾಡುವಾಗ ಪೊಲಿಸರು, ಚಾಸಾಃ 1, ನಾವು ಇಬ್ಬರು ಇದ್ದೇವು ಮತ್ತು ಅಕ್ಕ-

ಪಕ್ಕದ ಮನೆಯವರು ಇದ್ದರು. ನಿಪಿ-3 ನ್ನು ಯಾರು ಬರೆದಿರುತ್ತಾರೆ, ಏನು ಬರೆದಿರುತ್ತಾರೆ ಎಂದು ಮಾಹಿತಿ ಇಲ್ಲ ಎಂದರೆ ಸರಿ. ಪೊಲಿಸರು ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೇನೆ ನನಗೆ ಮಾಹಿತಿ ಗೊತ್ತಿರುವುದಿಲ್ಲ ಎಂದರೆ ಸರಿ. ಚಾಸಾಃ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **341/2021**

| | | |
|---|---|---|
| ಸಾಕ್ಷಿಯ ಹೆಸರುಃ | ಸಾಬವ್ವ | ಪ್ರಾಸಾಃ 4 |
| ಗಂಡನ/ತಂದೆಯ ಹೆಸರುಃ | ಭಾಗಪ್ಪ | ಚಾಸಾಃ 1 |
| ವಯಸ್ಸುಃ | 60 ವರ್ಷ | ದಿಃ 06-03-2026 |
| ಉದ್ಯೋಗಃ | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 6 ನನ್ನ ನಾದಿನಿಯ ಮಗಳು. ಚಾಸಾಃ 4 ಭಾವನ ಮಗ. ಆರೋಪಿತರು ನನ್ನ ಅಣ್ಣ-ತಮ್ಮಂದಿರು. ಸುಮಾರು 4 ವರ್ಷಗಳ ಹಿಂದೆ 5.00 ಗಂಟೆ ಸುಮಾರಿಗೆ ಆರೋಪಿ ನಂಬರ 1 ರವರು ನನ್ನ ಕಿವಿಗೆ ಹೊಡೆದಿರುತ್ತಾನೆ. 2 ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾನೆ. 3 ನೇ ಆರೋಪಿತನು ಜೀವ ಬೆದರಿಕೆ ಹಾಕಿರುತ್ತಾನೆ. ಚಾಸಾಃ 4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಾನು ಜಗಳವನ್ನು ಬಿಡಿಸಿದ ನಂತರ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಪೊಲಿಸರು ಬಂದು ವಿಚಾರಣೆ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

ಪಾಟಿ ಸವಾಲು ಃಆರೋಪಿ ಪರ ಶ್ರೀ ಎಮ. ಬಿ. ಪಿ ವಕೀಲರಿಂದಃ

1. ಸದರಿ 1 ನೇ ಆರೋಪಿನು ದೇವಸೂಗೂರಿನಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ಸೈದಾಪೂರದಲ್ಲಿ ಇರುತ್ತಾನೆ ಎಂದು ನುಡಿಯುತ್ತಾರೆ. ಸದರಿ 1 ನೇ ಆರೋಪಿನು ದೇವಸೂಗೂರಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಇದ್ದರೂ ಕೂಡ 1 ನೇ ಆರೋಪಿನು ಸೈದಾಪೂರಕ್ಕೆ ಬಂದಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿತರ ತಂದೆಯ ಹೆಸರು ಚಂದ್ರಾಮಪ್ಪ ನನ್ನ ಮಾವ. ನನಗೆ ಮಕ್ಕಳು ಇಲ್ಲ ಎಂದರೆ ಸರಿ. ಚಾಸಾಃ 4 ಭಾವನ ಮಗ. ಚಾಸಾಃ 4 ಚಂದ್ರಾಮಪ್ಪನ ಮಗ ಎಂದರೆ ಸರಿ. ಚಾಸಾಃ 5 ನಾದಿನಿ ಮಗಳು. ಆರೋಪಿತರು ಚಾಸಾಃ 4 ರವರ ವಿರುದ್ಧ ಸಿವಿಲ್ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಆರೋಪಿತರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ಸಮರ್ಪಕವಾಗಿ ಉತ್ತರ ನೀಡಿರುವುದಿಲ್ಲ. ಸದರಿ ಚಾಸಾಃ 4 ರವರು ನನ್ನ ಕಡೆಯಿಂದ ಸುಳ್ಳು ಪ್ರಕರಣ

ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಆರೋಪಿ ನಂಬರ 2 ಮತ್ತು 3 ರವರ ಮನೆ ನಮ್ಮ ಹೊಟೆಲಿನಿಂದ ಸಮಿಮೀಪದಲ್ಲಿ ಇರುತ್ತದೆ. ನಾನು ಹೋಟೆಲಗೆ ಹೋಗುವುದಿಲ್ಲ.

2. ನನಗೆ ಓದಲು-ಬರೆಯಲು ಬರುವುದಿಲ್ಲ. ಸದರಿ ನಿಪಿ-1 ಕ್ಕೆ ನಾನು ಸಹಿ ಮಾಡಿ ಕೊಟ್ಟಿರುತ್ತೇನೆ. ಸದರಿ ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮಗೆ ಹೊಡೆದಿರುತ್ತಾರೆ ಆದ್ದರಿಂದ ದೂರು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ 4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿವಿಲ್ ದಾವೆ ಇರುವುದರಿಂದ ನಾವು ಮತ್ತು ಆರೋಪಿತರು ಮಾತನಾಡುವುದಿಲ್ಲ ಎಂದರೆ ಸರಿ. ಚಾಸಾಃ 4 ಮತ್ತು 5 ರವರು ಆರೋಪಿತರ ಜೊತೆ ಮಾತನಾಡುವುದಿಲ್ಲ ಎಂದರೆ ಸರಿ. ಸದರಿ ನಾನು ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ಕಿವಿಗೆ ಹೊಡೆದಿರುತ್ತಾನೆ, 2 ನೇ ಆರೋಪಿತನು ಕೂದಲು ಹಿಡಿದು ಎಳೆದಾಡಿರುತ್ತಾನೆ ಮತ್ತು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ